ಉ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆಯೆಂದು ಘೋಷಣೆ ಮಾಡಿ ಜಿಲ್ಲೆಯಲ್ಲಿ ತೋಟಗಾರಿಕಾ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವುದೇ?

ಶ್ರೀ ಶಶಿಕಾಂತ ಅ. ನಾಯಿಕ (ತೋಟಗಾರಿಕೆ ಸಚಿವರು) :

ಅ) ರಾಜ್ಯ ಯಾವುದೇ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆಯೆಂದು ಗುರುತಿಸುವ ಪರಿಪಾಠವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಉ) ಮೇಲಿನ "ಅ"ನಲ್ಲಿ ನೀಡಲಾದ ಉತ್ತರ.

1182 (1414) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಜಾರಿಯಲ್ಲಿರುವ ವಿದೇಶಿ ನೆರವಿನ ಯೋಜನೆಗಳು ಸೇರಿದಂತೆ ವಿವಿಧ ಜಲಾನಯನ ಯೋಜನೆಗಳು ಯಾವುವು;

ಆ) ಈ ಯೋಜನೆಗಳಲ್ಲಿ ಪೂರ್ಣಗೊಂಡಿರುವ ಯೋಜನೆಗಳೆಷ್ಟು; ಪ್ರಗತಿಯಲ್ಲಿರುವ ಯೋಜನೆಗಳೆಷ್ಟು (ವಿವರ ನೀಡುವುದು);

ಇ) ಈ ಜಲಾನಯನ ಯೋಜನೆಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆಯಲಾಗಿದೆಯೇ;

ಈ) ಹಾಗಿದ್ದಲ್ಲಿ, ಯೋಜನಾ ಜವಾಬ್ದಾರಿಯನ್ನು ಯಾವ ಸಂಸ್ಥೆಗಳಿಗೆ ವಹಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಉ) ಈ ಹಿಂದೆ ಜಿಲ್ಲೆಯಲ್ಲಿನ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಜಲಾನಯನ ಯೋಜನೆಗಳಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಬಂದಿದ್ದಲ್ಲಿ, ಅಂತಹ ಸಂಸ್ಥೆಗಳು ಯಾವುವು; ಅವುಗಳಿಗೆ ಪುನಃ ಬೇರೆ ಯೋಜನೆಗಳನ್ನಾದರೂ ವಹಿಸಲಾಗಿದೆಯೇ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಈ ಅವಧಿಯಲ್ಲಿ ಯಾವುದೇ ವಿಶೇಷ ನೆರವಿನ ಯೋಜನೆಗಳನ್ನು ಅನುಷ್ಠಾನ ಗೊಳಿಸಿರುವುದಿಲ್ಲ.

1. ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ. NWDPRA
2. ನದಿ ಕಣಿವೆ ಯೋಜನೆ. / RVP
3. ಮರುಭೂಮಿ ಅಭಿವೃದ್ಧಿ ಯೋಜನೆ. / DDP
4. ನಬಾರ್ಡ್–ಆರ್ ಐ ಡಿಎಫ್. / NABARD-RIDF
5. ನಬಾರ್ಡ್–ಡಬ್ಲ್ಯೂ ಡಿಎಫ್, / NABARD-WDF
6. ಉಪ್ಪು, ಕ್ಷಾರ ಮತ್ತು ಜೌಗು ಸುಧಾರಣಾ ಯೋಜನೆ. Reclamation of Saline, Alkaline and Water Log ged Soils.

ಆ) ಈ ಯೋಜನೆಗಳಲ್ಲಿ ಒಟ್ಟು 58 ಕಿರು ಜಲಾನಯನಗಳು ಪೂರ್ಣಗೊಂಡಿವೆ. ಹಾಗೂ ಒಟ್ಟು 281 ಕಿರುಜಲಾನಯನಗಳು ಪ್ರಗತಿಯಲ್ಲಿವೆ. ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ.	ಯೋಜನೆ	ಪೂರ್ಣಗೊಂಡ ಕಿರುಜಲಾ ನಯನಗಳು	ಪ್ರಗತಿಯಲ್ಲಿರುವ ಕಿರುಜಲಾ ನಯನಗಳು	ಒಟ್ಟು
1	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	3	13	16
2	ಮರುಭೂಮಿ ಅಭಿವೃದ್ಧಿ ಯೋಜನೆ	55	253	308

3	ನದಿ ಕಣಿವೆ ಯೋಜನೆ	---	13	13
4	ನಬಾರ್ಡ್ - WDF	---	2	2
	ಒಟ್ಟು	**58**	**281**	**339**

ಇ) ಹೌದು

ಈ) ಬಾಗಲಕೋಟೆ ತಾಲ್ಲೂಕಿನಲ್ಲಿ ಮಾತ್ರ 4 ಕಿರು ಜಲಾನಯನಗಳನ್ನು ಗ್ರಾಮೀಣ ಅಭಿವೃದ್ಧಿ ಅನುಷ್ಠಾನ ಸಂಸ್ಥೆ, ಬಾಗಲಕೋಟೆ ಇವರಿಗೆ ವಹಿಸಲಾಗಿದೆ.

ಉ) ಹೌದು

ಊ) ವಿವರಗಳನ್ನು ಕೆಳಗೆ ನೀಡಲಾಗಿದೆ. ಇವುಗಳಿಗೆ ಪುನಃ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ಬೇರೆ ಯಾವುದೇ ಯೋಜನೆಗಳನ್ನು ವಹಿಸಿರುವುದಿಲ್ಲ.

1. ಯುವಕ ವಿಕಾಸ ಕೇಂದ್ರ, ಬಿಜಾಪುರ.
2. ಸಬಲಾ ಸಂಸ್ಥೆ, ಬಿಜಾಪುರ
3. ಇಂಡಿಯನ್ ಸೊಸೈಟಿ ಫಾರ್ ಎನ್‌ವಿರಾನ್ ಮೆಂಟಲ್, ಎಜುಕೇಷನಲ್ ಅಂಡ್ ರಿಸರ್ಚ್ (ಐ ಸೀರ್)

1183 (1416) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ಸಹಕಾರ ಬ್ಯಾಂಕ್ ಮೂಲಕ ನೇಕಾರರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆ ಜಾರಿಯಾಗದಿರಲು ಕಾರಣವೇನು? ಇದಕ್ಕಿರುವ ತಾಂತ್ರಿಕ ತೊಂದರೆಗಳೇನು?

ಆ) ಸರ್ಕಾರದ ಪಾಲಿನ ಬಡ್ಡಿ ಭರ್ತಿ ವಿಳಂಬದ ಕಾರಣ ನೀಡಿ ಪಟ್ಟಣ ಸಹಕಾರ ಬ್ಯಾಂಕುಗಳು ನೇಕಾರರಿಗೆ ಸಾಲ ನೀಡುವುದು ನಿಜವೇ?

ಇ) ಹಾಗಿದ್ದಲ್ಲಿ, ನೇಕಾರರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ನೀಡಲು ಜರೂರಾಗಿ ಕ್ರಮ ಕೈಗೊಳ್ಳಲಾಗುವುದೆ?